ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ
ರವರ ಕಛೇರಿ

ನಂ.86, ಶುಭೋದಯ ಕಾಂಪ್ಲೆಕ್ಸ್,
ರೈಲ್ವೆ ಸಮಾನಾಂತರ ರಸ್ತೆ,
ಕುಮಾರ ಪಾರ್ಕ್ ಪಶ್ಚಿಮ,
ಬೆಂಗಳೂರು -560 020

ಸಂಖ್ಯೆ: ಕೈಜಇ/ಕೈಮಗ್ಗ/ಅಧೀ/ಸಾಲಮನ್ನಾ/ನೇವಿಪ್ರಾ/2018-19 ಸುತ್ತೋಲೆ-5 ದಿನಾಂಕ:20-07-2018

## ಸುತ್ತೋಲೆ-5

ವಿಷಯ:- ನೇಕಾರರ ಸಾಲಮನ್ನಾ ಪ್ರಸ್ತಾವನೆ ಪರಿಶೀಲನೆ- ಮಾರ್ಗಸೂಚಿಗಳು

ಉಲ್ಲೇಖ:- 1) ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017, ಬೆಂಗಳೂರು, ದಿನಾಂಕ: 13.12.2017, 29.01.2018 20.02.2018 ಮತ್ತು 24.03.2018.

2) ಈ ಕಛೇರಿಯ ಸುತ್ತೋಲೆಗಳು ದಿನಾಂಕ:04.01.2018, 11.01.2018, 26.02.2018 ಮತ್ತು 09.05.2018. (1 ರಿಂದ 4 ರಂತೆ)

*-*-*

ರಾಜ್ಯದ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘ, ವಿವಿಧೋದ್ದೇಶ ಸಹಕಾರಿ ಸಂಘ / ಕೃಷಿ ಪತ್ತಿನ ಸಹಕಾರ ಸಂಘ / ಕೈಗಾರಿಕಾ ಸಹಕಾರ ಸಂಘ / ಇತರೆ ಸಹಕಾರಿ ಬ್ಯಾಂಕ್ / ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ.50,000/- ಗಳವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ ಕೆಲವು ಷರತ್ತುಗಳಿಗೆ ಒಳಪಟ್ಟು ಉಲ್ಲೇಖ (1) ರ ಸರ್ಕಾರಿ ಆದೇಶಗಳು ಮತ್ತು (2) ಈ ಕಛೇರಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಚುನಾಯಿತರಾದ ಪ್ರತಿನಿದಿ / ಸಾರ್ವಜನಿಕರು ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿ ದೂರುಗಳನ್ನು ನೀಡಿ ಮಾಹಿತಿಯನ್ನು ಪಡೆಯುತ್ತಾರೆ. ದೂರುಗಳಲ್ಲಿ ಸಂಘ / ಸಂಸ್ಥೆಗಳು ಕೇವಲ ಸರ್ಕಾರದ ಅನುದಾನವನ್ನು ಪಡೆಯಲು ನಕಲು ದಾಖಲೆಗಳನ್ನು ಸೃಷ್ಟಿಸಿ ಅನುದಾನವನ್ನು ಪಡೆಯುತ್ತಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಸಂಬಂಧಪಟ್ಟ ಉಪ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಉಪ / ಸಹಾಯಕ ನಿರ್ದೇಶಕರು ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸತಕ್ಕದ್ದು.

| ಕ್ರ.ಸಂ | ಪರಿಶೀಲಿಸಬೇಕಾದ ಅಧಿಕಾರಿಗಳು | | ಪರಿಶೀಲಿಸಬೇಕಾದ ಅಂಶಗಳು |
|---|---|---|---|
| 1 | ಉಪ / ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ | 1. | ನೇಕಾರರ ಸಹಕಾರ ಸಂಘಗಳು/ಬ್ಯಾಂಕುಗಳು ಹಾಗೂ ವಿವಿಧ ಸಹಕಾರ ಸಂಘಗಳು ಒಂದೇ ಘಟಕದ ಆಧಾರದ ಮೇಲೆ ಒಂದೇ ಕುಟುಂಬದ ಹಲವಾರು ಸದಸ್ಯರಿಗೆ ಸಾಲವನ್ನು ನೀಡಿದ್ದು, ಈ ಬಗ್ಗೆ ವಿವರವಾಗಿ ಪರಿಶೀಲಿಸಿ ಅರ್ಹ ನೇಕಾರರನ್ನು ಗುರುತಿಸಿ ಯೋಜನೆಯಲ್ಲಿ ಅಳವಡಿಸುವುದು. |
| | | 2. | ಬೇನಾಮಿ ಸಾಲಗಳನ್ನು ನೀಡಿದ್ದಲ್ಲಿ ವಸ್ತುನಿಷ್ಠವಾಗಿ ಪರಿಶೀಲಿಸಿ ಬೇನಾಮಿ ಸಾಲಗಳು ಕಂಡುಬಂದಲ್ಲಿ ನಿಯಮಾನುಸಾರ ಕ್ರಮವಿಡುವುದು. |
| | | 3. | ಸಾಲಗಾರರ ಹೆಸರಿನಲ್ಲಿ ಫೋರ್ಜರಿ ಮಾಡಿ ಸಾಲಗಾರರಲ್ಲದ ಸದಸ್ಯರುಗಳನ್ನು, ದಾಖಲೆಗಳನ್ನು ಸೃಷ್ಠಿಸಿ ಸಾಲಗಾರರೆಂದು ಕ್ಲೈಮು (Claim) ಮಾಡಿದ್ದಲ್ಲಿ ಸೂಕ್ತ ಪರಿಶೀಲನೆ ನಡೆಸಿ ಅರ್ಹರನ್ನು ಮಾತ್ರ ಪರಿಗಣಿಸುವುದು. |
| | | 4. | ಸಂಘದ ನಗದು ಪುಸ್ತಕ, ಸಾಲದ Ledger ಗಳನ್ನು ಪರಿಶೀಲಿಸಿ ದೃಢೀಕರಿಸಲು ಸೂಚಿಸಿದೆ. |
| | | 5. | ಇವುಗಳಲ್ಲದೇ ಸರ್ಕಾರಿ ಆದೇಶದಲ್ಲಿರುವ ಅನುಬಂಧದಲ್ಲಿ ತಿಳಿಸಿರುವ ಅಂಶಗಳನ್ನು ಪರಿಶೀಲಿಸುವುದು. |

| ಕ್ರ.ಸಂ | ಪರಿಶೀಲಿಸಬೇಕಾದ ಅಧಿಕಾರಿಗಳು | ಪರಿಶೀಲಿಸಬೇಕಾದ ಅಂಶಗಳು |
|---|---|---|
| 2 | ಉಪ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ | 1. ಸಾಲದ ನೈಜತೆ ಬಗ್ಗೆ ಪರಿಶೀಲಿಸಲು ಸೂಚಿಸಿದೆ. |
| | | 2. ಸಾಲವನ್ನು ನೀಡುವಾಗ ಅನುಸರಿಸಬೇಕಾದ ವಿಧಾನಗಳನ್ನು (Procedure) ಪಾಲಿಸಲಾಗಿದೆಯೇ? ಪರಿಶೀಲಿಸುವುದು. |
| | | 3. ಸಂಘಗಳು ನೀಡಿರುವ ಸಾಲದ ಮೂಲವನ್ನು ಪರಿಶೀಲಿಸುವುದು. |
| | | 4. ಡಿ.ಸಿ.ಸಿ. ಬ್ಯಾಂಕುಗಳಿಂದ/ಇತರೆ ಬ್ಯಾಂಕುಗಳಿಂದ/ಸ್ವಂತ ಬಂಡವಾಳದಿಂದ ನೀಡಲಾಗಿದೆಯೇ? ಎಂಬುದನ್ನು ಪರಿಶೀಲಿಸುವುದು. |
| | | 5. ಸ್ವಂತ ಬಂಡವಾಳದಿಂದ ಸಾಲವನ್ನು ನೀಡಿದ್ದಲ್ಲಿ ಸ್ವಂತ ಬಂಡವಾಳದ ಸಂಪೂರ್ಣ ವಿವರಗಳನ್ನು ಪರಿಶೀಲಿಸಿ ಸಂಘದ ಆರ್ಥಿಕ ಸುಸ್ಥಿರತೆ ಬಗ್ಗೆ ಪರಿಶೀಲಿಸುವುದು ಹಾಗೂ ಅರ್ಹ ಸಾಲಗಾರರನ್ನು ಮಾತ್ರ ಪರಿಗಣಿಸುವುದು. |
| | | 6. ದಾಖಲಾತಿಗಳನ್ನು ಹೊಸದಾಗಿ ಸೃಷ್ಟಿಸಿ ದುರುದ್ದೇಶ ಪೂರಕವಾಗಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ ವಿವರವಾಗಿ ಪರಿಶೀಲಿಸಿ ಸೂಕ್ತ ಕ್ರಮವಿಡುವುದು. |
| | | 7. ಸಂಘ/ಬ್ಯಾಂಕುಗಳಿಗೆ ಭೇಟಿ ನೀಡಿ ಎಲ್ಲಾ ದಾಖಲಾತಿಗಳನ್ನು ವಿವರವಾಗಿ ಪರಿಶೀಲಿಸಿ ಅರ್ಹ ಸಾಲಗಾರರನ್ನು ಗುರುತಿಸುವುದು ಹಾಗೂ ಅರ್ಹ ಸಾಲಗಾರರ ಕ್ಲೈಮು (Claim) ಗಳನ್ನಷ್ಟೇ ಅನುಮೋದಿಸುವುದು. |
| | | 8. ಕ್ಲೈಮು (Claim) ಮಾಡಿರುವ ಮೊತ್ತದ ನೈಜತೆಯನ್ನು ಪರಿಶೀಲಿಸುವುದು ಹಾಗೂ ಕ್ಲೈಮು (Claim) ಮಾಡಿರುವ ಬಡ್ಡಿಯು ನಿಯಮಾನುಸಾರ ಲೆಕ್ಕಾಚಾರ (Calculate) ಮಾಡಿದ್ದಾರೆಯೇ ಎಂದು ಪರಿಶೀಲಿಸುವುದು. |
| | | 9. ಸಂಘಗಳ ಇತ್ತೀಚಿನ 3 ವರ್ಷಗಳ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸಿ ಸಂಘದ ಸಾಲಗಾರರ ವಿವರಗಳನ್ನು ಸಾಲ ಮರುಪಾವತಿ ವಿವರಗಳನ್ನು ಸಂಪೂರ್ಣವಾಗಿ ಪರಿಶೀಲಿಸುವುದು. |
| | | 10. ಕನಿಷ್ಟ 2016-17 ನೇ ಸಾಲಿನವರೆವಿಗೆ ಲೆಕ್ಕಪರಿಶೋಧನೆ ಆಗಿರತಕ್ಕದ್ದು. |

ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿ ಕೇಂದ್ರ ಕಛೇರಿಗೆ ಈಗಾಗಲೇ ಸಲ್ಲಿಸಿರುವ ನೇಕಾರರ ಪ್ರಸ್ತಾವನೆಗಳನ್ನು ಹೊರತುಪಡಿಸಿ, ಸಂಘ / ಸಂಸ್ಥೆಗಳಿಗೆ ಸಾಲ ಮಂಜೂರು ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರದಲ್ಲಿ ನೇಕಾರರ ನೈಜತೆ /ಅರ್ಹತೆ ಬಗ್ಗೆ ಪರಿಶೀಲನಾ ಕ್ರಮ ಕೈಗೊಳ್ಳುವುದು. ಇಂತಹ ಪ್ರಕರಣಗಳನ್ನು ಉಪ / ಸಹಾಯಕ ನಿರ್ದೇಶಕರು ಮಾರ್ಗಸೂಚಿಯ ಪ್ರಕಾರ ಉಪ ನಿರ್ದೇಶಕರು, ಲೆಕ್ಕಪತ್ರ ಇಲಾಖೆ ಇವರ ಅಭಿಪ್ರಾಯದೊಂದಿಗೆ ಜಂಟಿ ನಿರ್ದೇಶಕರನ್ನು ಸಂಪರ್ಕಿಸಿ, ತದನಂತರ ಪರಿಶೀಲನಾ ಕ್ರಮ ಕೈಗೊಂಡು ಸೂಕ್ತವಾದ ಪ್ರಸ್ತಾವನೆಯನ್ನು ಜಂಟಿ ನಿರ್ದೇಶಕರ ಮುಖಾಂತರ ಮಂಜೂರಾತಿಗೆ ಶಿಫಾರಸ್ಸು ಮಾಡುವುದು.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

20/4/18

**ಇವರಿಗೆ :-**

1. ಅಧಿಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಛೇರಿ ಬೆಂಗಳೂರು ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಶಂಕರಮಠ ರಸ್ತೆ, ಬಸವನಗುಡಿ ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ತಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ / ಮಾಹಿತಿ ನೀಡಲು ಕೋರಿದೆ.

3. ಜಂಟಿ ನಿಬಂಧಕರು ಸಹಕಾರಿ ಸಂಘಗಳು, ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಛೇರಿ ಬೆಂಗಳೂರು ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ --------------ವಲಯ/ವಿಭಾಗ --------- ಇವರ ಮಾಹಿತಿ ಹಾಗೂ ಜಿಲ್ಲಾ ಮಟ್ಟದಿಂದ ಬಂದಂತಹ ಕ್ಲೈಮ್ ಬಿಲ್ಲುಗಳ ಶೇಕಡಾ 5% (ಶೇಕಡಾ ಐದು) ರಷ್ಟು ಪ್ರಕರಣಗಳನ್ನು ಖುದ್ದಾಗಿ ಪರಿಶೀಲಿಸಿ ದೃಢೀಕರಿಸಿ ಶಿಫಾರಸು ಮಾಡತಕ್ಕದ್ದು.
5. ಜಂಟಿ / ಉಪ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ------------------ ಜಿಲ್ಲೆ ಇವರ ಮಾಹಿತಿ ಹಾಗೂ ಬಿಲ್ಲುಗಳ ಪರಿಶೀಲನೆಯ ವೇಳೆ ಮೇಲಿನ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ವರದಿಯಲ್ಲಿ ದಾಖಲಿಸಲು ತಿಳಿಸಿದೆ.
6. ಉಪ / ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, --------------ಜಿಲ್ಲಾ ಪಂಚಾಯತ್ -------------- ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸುತ್ತಾ ಎಲ್ಲಾ ನೇಕಾರರ ಸಹಕಾರಿ ಸಂಘಗಳ ಗಮನಕ್ಕೆ ತರಲು ನಿರ್ದೇಶಿಸಿದೆ.
7. ಶ್ರೀ ವಿಕಾಸ ಡೋಂಗ್ರೆ ಮೆ: ಯು.ಸಿ.ಬಿ.ಸಿ.ಎಸ್. ಗಿರಿನಗರ ಬೆಂಗಳೂರು ಇವರಿಗೆ ಕಳಿಸುತ್ತಾ ಈ ಸುತ್ತೋಲೆಯನ್ನು ಸಾಲಮನ್ನಾ ವೆಬ್ ಸೈಟನಲ್ಲಿ ಪ್ರಕಟಿಸಲು ತಿಳಿಸಿದೆ.
8. ಕಛೇರಿ ಪ್ರತಿ.